ಅರ್ಥವಾಯಿತು, ನಿವೇಶನ ಕೊಟ್ಟಿದ್ದಾರೆ ಅವರು ಇನ್ನು ನಿವೇಶನವನ್ನೇ ತೆಗೆದುಕೊಂಡಿಲ್ಲ. ನಮಗೆ ಮುಂಚೆ ಬಿಲ್ಡಿಂಟ್‌ಕಟ್ಟಿ ಎಂದು ನಾನು ಎರಡಕ್ಕೂ ಭರವಸೆ ಕೊಡುತ್ತೇನೆ ಆದಷ್ಟೂ ಪ್ರಯತ್ನ ಮಾಡತ್ತೇನೆ. ಈ ವರ್ಷ ಸುಮಾರು 20 ಕೋಟಿ ಹಣವನ್ನು ಹುಡ್ಕೊ ಸಂಸ್ಥೆಯಿಂದ ಸಾಲದ ರೂಪದಲ್ಲಿ ಪೋಲೀಸ್ ಕಟ್ಟಡಗಳನ್ನು ಕಟ್ಟಲಿಕ್ಕೆ ಸಿಬ್ಬಂದಿ ವರ್ಗದವರ ಮನೆಗಳನ್ನು ಕಟ್ಟಲಿಕ್ಕೆ, ಪೋಲೀಸ್ ಠಾಣೆಗಳನ್ನು ಕಟ್ಟಲಿಕ್ಕೆ ತೆಗೆದುಕೊಳ್ಳುತ್ತಾ ಇದ್ದೇನೆ. ಇದು ಬಂದ ನಂತರ ಅದ್ಯತೆಯ ಆಧಾರದೆ ಮೇಲೆ, ಅವಶ್ಯಕತೆಯ ಆಧಾರದ ಮೇಲೆ ಕಟ್ಟಡಗಳನ್ನು ಕಟ್ಟಲಿಕ್ಕೆ ನಿವೇಶಗಳನ್ನು ತೆಗೆದುಕೊಳ್ಳಲಿಕ್ಕೆ ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತೇನೆ.

ಮಂಡ್ಯ ಜಿಲ್ಲೆಯಲ್ಲಿ ಕೆರೆಗಳ ದುರಸ್ತಿ ಕಾರ್ಯ.

588 - ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯಲ್ಲಿ ದುರಸ್ತಿ ಆಗತ್ಯವಿರುವ ಒಟ್ಟು ಕೆರೆಗಳ ಸಂಖ್ಯೆ ಎಷ್ಟು;

ಆ) ಈಗ ಯಾವ ಯಾವ ಕೆರೆಗಳ ದುರಸ್ತಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಅದಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು ಹಾಗೂ ಯಾವಾಗ ಪೂರ್ಣಗೊಳಿಸಲಾಗುವುದು;

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಸಚಿವೆಯವರು):

ಅ) 129 ಕೆರೆಗಳು

ಆ) 11 ಕೆರೆಗಳ ದುರಸ್ತಿ ಕಾಮಗಾರಿಗಳನ್ನು ಕೈಗೆತ್ತಿಗೊಳ್ಳಲಾಗಿದೆ (ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ). ಒಟ್ಟು ಅಂದಾಜು ವೆಚ್ಚ 38.35 ಲಕ್ಷರೂ.ಗಳು. 1995-96ನೇ ಸಾಲಿನಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಅನುಬಂಧ

ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ಕೆ. ಎನ್.ನಾಗೇಗೌಡ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 588ಕ್ಕೆ ಸಂಬಂಧಿಸಿದ ಮಾಹಿತಿ

ಕ್ರ ಸಂ	ತಾಲ್ಲೂಕು	ಕಾಮಗಾರಿಯ ಹೆಸರು	ಅಂದಾಜು ವೆಚ್ಚ (ಲಕ್ಷ ರೂ. ಗಳಲ್ಲಿ)	ಇದುವರೆಗೂ ಆದ ವೆಚ್ಚ (ಲಕ್ಷ ರೂ. ಗಳಲ್ಲಿ)
ಅ)	ಸಣ್ಣ ನೀರಾವರಿ ಕಾಮಗಾರಿಗಳು :			
1)	ಪಾಂಡವಪುರ	ಸುಂಕತೊಣ್ಣೂರು ಕೆರೆಯಪೈಪ್‌ಔಟ್ ಲಿಟಗಳನ್ನು ದುರಸ್ತಿಪಡಿಸುವುದು	0.25	-
2)	ನಾಗಮಂಗಲ	ರಾಮಚಂದ್ರಪುರ ಅಗ್ರಹಾರ ಕೆರೆಯ ಬಲದಂಡೆ ಕೊಡಿಯ ಮೇಲ್ಭಾಗ ಮತ್ತು ಕೆಳಭಾಗದ ರಕ್ಷಣೆ ಕೆಲಸ, ನಾಲೆ ರಿಪೇರಿ	0.25	-
3)	ನಾಗಮಂಗಲ	ಬಂಡಿಗನವಿಲೆ ಕೋಡಿಹಳ್ಳ ರಿಪೇರಿ ಕೆಲಸ	0.25	-
4)	ನಾಗಮಂಗಲ	ಅಂಚಿಬೆಟ್ಟನಹಳ್ಳಿ ಕೆರೆ ಏರಿ ಮತ್ತು ತೂಬುಗಳ ದುರಸ್ತಿ ನಾಲಾ ಅಭಿವೃದ್ಧಿ	0.25	-
5)	ನಾಗಮಂಗಲ	ಪಡುವಲ ಪಟ್ಟಣ ಕೆರೆಯ ಕೋಡಿ ಹಳ್ಳದ ಕೆರೆ ದುರಸ್ತಿ ಏನೇ ಹಂತದ ನಾಲಾ ಅಭಿವೃದ್ಧಿ	0.250	-

ಆ) ಜಿಲ್ಲಾ ಪಂಚಾಯತ್ ಕಾಮಗಾರಿಗಳು

1)	ಮದ್ದೂರು	ಕಡಲೂರು ಚಿಕ್ಕ ಕೆರೆ ಜೀರ್ಣೋದ್ಧಾರೆ	3.00	1.60
2)	ಮಂಡ್ಯ	ಕಂಬದಹಳ್ಳಿ ಕನ್ನಹಟ್ಟಿ ಕೆರೆ ಜೀರ್ಣೋದ್ಧಾರ	15.75	8.83
3)	ನಾಗಮಂಗಲ	ಚಿಟ್ಟಹಳ್ಳಿ ಕೆರೆ ಜೀರ್ಣೋದ್ಧಾರ	3.50	1.23
4)	ಪಾಂಡವಪುರ	ಕಸಗೊನಹಳ್ಳಿ ಕೆರೆ ಜೀರ್ಣೋದ್ಧಾರ	4.30	3.60
5)	ಶ್ರೀರಂಗಪಟ್ಟಣ	ಸಿದ್ದಾಪುರ ಕೆರೆ ಜೀರ್ಣೋದ್ಧಾರ	4.30	1.17
6)	ಶ್ರೀರಂಗಪಟ್ಟಣ	ಮಾರಸಿಂಗಹಳ್ಳಿ ಕೆರೆ ಜೀರ್ಣೋದ್ಧಾರ	3.80	0.97
		ಒಟ್ಟು	38.35	17.40

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ಮಂಡ್ಯ ಜಿಲ್ಲೆಯಲ್ಲಿ ದುರಸ್ತಿ ಆಗುತ್ತಾ ಇರತಕ್ಕಂತಹ ಕೆರೆಗಳ ಸಂಖ್ಯೆಯನ್ನು ಕೇಳಿದ್ದೆ ಒಂದೇ ಒಂದು ವಿಶೇಷವಾದಂತಹ ಸಣ್ಣ ಪ್ರಶ್ನೆ ಎಂದರೆ ಯಾವ್ಯಾವ ಕೆರೆಗಳನ್ನು ತೆಗೆದುಕೊಂಡಿದ್ದೀರಿ, ಇದರಲ್ಲಿ ಒಂದು ನಗರಕೆರೆ ಮತ್ತು ಸುಜ್ಜಲೂರು, ಕದಲಬಾಗಿಲು, ಎಲಾಹಳ್ಳಿ ಈ ನಾಲ್ಕು ಕೆರೆಗಳನ್ನು ಏನು ದುರಸ್ತಿ ಮಾಡಲು ಇಟ್ಟುಕೊಂಡಿದ್ದೀರಿ ಅದನ್ನು ದಯವಿಟ್ಟು ಈ ವರ್ಷದಲ್ಲೇ ಮಾಡಿ ಮುಗಿಸಿಕೊಡುತ್ತೀರೋ?

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್ : ಸನ್ಮಾನ್ಯ ಅಧ್ಯಕ್ಷರೇ, ನಾಗೇಗೌಡರು ಕೇಳಿರತಕ್ಕಂತಹ ಆ ನಾಲ್ಕು ಕೆರೆಗಳ ದುರಸ್ತಿ ಕೆಲಸವನ್ನು ಈ ವರ್ಷವೇ ಪೂರೈಸಿಕೊಡುತ್ತೇನೆ.

ಅಧ್ಯಕ್ಷರು : ಬಿ.ಬಿ. ಚಿಮ್ಮನಕಟ್ಟಿಯವರೇ ತಮ್ಮ ಚುಕ್ಕೆ ಪ್ರಶ್ನೆ ಸಂಖ್ಯೆ : 363ಕ್ಕೆ ಸಚಿವರು ಸಮಯವನ್ನು ಕೇಳಿದ್ದಾರೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಹೌದು, ಅದಕ್ಕೆ ಸಮಯಬೇಕು.

ಅಧ್ಯಕ್ಷರು : ಏನು ನಿಮ್ಮ ಪ್ರಶ್ನೆ ಕೇಳಿ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ ಕ್ಷೇತ್ರ) : ಬಹಳ ಕಷ್ಟಪಟ್ಟು ಸರ್ಕಾರಕ್ಕೆ ಈ ಪ್ರಶ್ನೆ ಹಾಕಿದಮೇಲೆ, ಇವರಿಗೆ ಉತ್ತರ ಕೊಡಲು ಸಿಬ್ಬಂದಿ ಇಲ್ಲವೋ ಅಥವಾ ಅವರಿಗೆ ಅನುಕೂಲತೆ ಇಲ್ಲವೋ? ಒಂದು ಚಿಕ್ಕ ನೀರಾವರಿ ಯೋಜನೆಯ ಸಲುವಾಗಿ ಪ್ರಶ್ನೆ ಕೇಳಿದರೆ, ಅದಕ್ಕೆ ಉತ್ತರ ಕೊಡುವುದಕ್ಕೆ ತಿಂಗಳುಗಟ್ಟಲೆ ಕಾಲಾವಕಾಶ ಬೇಕೆಂದರೆ ಹೇಗೆ?

ಅಧ್ಯಕ್ಷರು : ನಿಮಗೆ ಏನು ಬೇಕು ಹೇಳಿ ನಾನು ಕೊಡಿಸುತ್ತೇನೆ. ಹಣ ಬೇಕೆ? ಕೆಲಸ ಮುಗಿಸಬೇಕೇ?

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್ : ಈ ವಿಷಯದಲ್ಲಿ ನಿರ್ದಿಷ್ಟವಾದಂತಹ ಉತ್ತರಬೇಕು ಅಂದರೆ ನನಗೆ ಕಾಲಾವಕಾಶಬೇಕಾಗುತ್ತದೆ. ಏಕೆಂದರೆ ಎರಡು ದಿವಸ ರಜ ಬಂದಿದ್ದರಿಂದ ಡಿಪಾರ್ಟ್‌ಮೆಂಟ್‌ನಿಂದ ಉತ್ತರ ಬರುವುದು ತಡವಾಗಿದೆ.

ಅಧ್ಯಕ್ಷರು : ಉತ್ತರವನ್ನು ನಿಧಾನವಾಗಿ ಕೊಡಿ ಅವರು ಬಹಳ ಹಿಂದುಳಿರತಕ್ಕಂತಹ ಪ್ರದೇಶದಿಂದ ಬಂದಿರುತ್ತಾರೆ, ಹೆಚ್ಚಾಗಿ ಹಣವನ್ನು ಕೊಟ್ಟು ಕೆಲಸ ಮಾಡಿಸಿಕೊಡಿ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಸಾಧ್ಯವಾದಷ್ಟೂ ಈ ವರ್ಷದಲ್ಲಿ ಹೆಚ್ಚಾಗಿ ಹಣವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ : ಇಷ್ಟು ಹೇಳಿದ್ದಾರೆ ನಮಗೆ ಉತ್ತರವೇ ಬೇಕಾಗಿರಲಿಲ್ಲ. ಈಗ ಹಿಂದೆ ಲೋಕೋಪಯೋಗಿ ಮಂತ್ರಿಗಳಾಗಿದ್ದಂಥ ಮಾನ್ಯ